ಅನುಬಂಧ - 1

| | ಸಿಬ್ಬಂದಿಯ ವಿವರ | ಹುದ್ದೆ |
|---|---|---|
| 1) | ಪ್ರಾಧ್ಯಾಪಕರು | 5 |
| 2) | ರೀಡ್ಕರ್ | 7 |
| 3) | ಲೆಕ್ಚರರ್ | 11 |
| 4) | ಕಛೇರಿ ಅಧೀಕ್ಷಕರು | 2 |
| 5) | ಪ್ರಥಮ ದರ್ಜೆ ಸಹಾಯಕರು | 3 |
| 6) | ದ್ವಿತೀಯ ದರ್ಜೆ ಸಹಾಯಕರು | 4 |
| 7) | ಶೀಘ್ರಲಿಪಿಕಾರರು ದರ್ಜೆ- 1 | 2 |
| 8) | ಬೆರಳಚ್ಚುಗಾರರು | 1 |
| 9) | ಗ್ರಂಥಪಾಲಕರು ದರ್ಜೆ-2 | 1 |
| 10) | ದಾದಿಯರು | 5 |
| 11) | ಡೆಂಟಲ್ ಮಕ್ಯಾನಿಕ್ | 6 |
| 12) | ಡೆಂಟಲ್ ಹೈಜಿನಿಕ್ | 4 |
| 13) | ಲ್ಯಾಬೋರೇಟರಿ ಟೆಕ್ನೀಷಿಯನ್ | 2 |
| 14) | ಗ್ರೂಪ್-ಡಿ | 38 |

**ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸುವುದು.**

2222 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳುವ ಅಧಿಕಾರಿ ಯಾರಿಗೆ ಕೊಡಲಾಗಿದೆ ಹಾಗೂ ಎಂದಿನಿಂದ ಕೊಡಲಾಗಿದೆ?.*

*ಆ) ಧಾರವಾಡ ಜಿಲ್ಲೆಯಲ್ಲಿ 7-8-95ರೊಳಗೆ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳಲಾಗಿದೆಯೇ?*

*ಇ) ನೇಮಿಸದೆ ಇದ್ದರೆ ಯಾತಕ್ಕಾಗಿ ನೇಮಿಸಿಕೊಳ್ಳಲಾಗಲಿಲ್ಲ ಹಾಗೂ ವಿಳಂಬವಾಗಲು ಕಾರಣವೇನು?*

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುತ್ತಿಗೆ ಆಧಾರದ ವೈದ್ಯರ ನೇಮಕದ ಅಧಿಕಾರವನ್ನು ಯಾರಿಗೂ ಕೊಟ್ಟಿರುವುದಿಲ್ಲ. ಜಿಲ್ಲಾಧಿಕಾರಿಯವರು ಅರ್ಜಿಗಳನ್ನು ಕರೆದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕಳುಹಿಸಿದಲ್ಲಿ ಸರ್ಕಾರದಲ್ಲಿನೆ ನೇಮಕಾತಿ ಆದೇಶವನ್ನು ಹೊರಡಿಸಲಾಗುತ್ತದೆ. ಧಾರವಾಡ ಜಿಲ್ಲಾಧಿಕಾರಿಯಿಂದ ಆಯ್ಕೆ ಪಟ್ಟಿಯು ಇನ್ನೂ ಬಂದಿಲ್ಲವಾದುದರಿಂದ ಇನ್ನೂ ನೇಮಕಾತಿ ಆದೇಶವನ್ನು ಹೊರಡಿಸಿರುವುದಿಲ್ಲ.

**ಗ್ರಾಮ ಪಂಚಾಯತ್ ಅಡಿಯಲ್ಲಿ ಗೌರವ ಶಿಕ್ಷಕರು**

2223 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗ್ರಾಮ ಪಂಚಾಯತ್ ಅಡಿಯಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸುವವರನ್ನು ಕೆಲಸದಿಂದ ತೆಗೆಯಬಾರದೆಂದು ಹೈಕೋರ್ಟ ತೀರ್ಪು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಬಂದಿದ್ದಲ್ಲಿ ಈ ಸಲದ ಶಿಕ್ಷಕರ ನೇಮಕಾತಿಯಲ್ಲಿ ಕೇವಲ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗೌರವ ಶಿಕ್ಷಕರಿಗೆ ಮಾತ್ರ ಕೃಪಾಂಕ ನೀಡಿರುವುದು ನ್ಯಾಯವೇ?*

*ಇ) ಹೈಕೋರ್ಟ ತೀರ್ಪಿನಂತೆ ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗೌರವ ಶಿಕ್ಷಕರಿಗೂ ಕೃಪಾಂಕ ನೀಡುವ ಭರವಸೆ ಸರ್ಕಾರ ನೀಡುವುದೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಮಂಡಲ ಪಂಚಾಯತಿ ಗೌರವ ಶಿಕ್ಷಕರ ಕೆಲವು ಪ್ರಕರಣಗಳಲ್ಲಿ ಕೆಲಸದಿಂದ ತೆಗೆಯದಂತೆ ಹೈಕೋರ್ಟ ಆದೇಶಿಸಿದೆ.

ಆ) ಜಿಲ್ಲಾ ಪಂಚಾಯಿತಿಯಿಂದ ನೇಮಕ ಮಾಡಲ್ಪಟ್ಟ ಕೆಲವು ಗೌರವ ಶಿಕ್ಷಕರು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆ ಖಾಯಂಗೊಳಿಸಲು ಅರ್ಜಿ ಸಲ್ಲಿಸಿದರು. ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 213: 90 ರಂದು 354: 90ಗೆ ಸಂಬಂಧಿಸಿದಂತೆ ದಿನಾಂಕ 10.7.91 ರಂದು ತೀರ್ಪು ನೀಡಿ ನೇಮಕಾತಿ ಪ್ರಕ್ರಿಯೇ ಮುಂದುವರಿಸಲು ಹಾಗೂ ಜಿಲ್ಲಾ ಪಂಚಾಯತಿ ಗೌರವ ಶಿಕ್ಷಕರಿಗೆ ನೇಮಕಾತಿಯಲ್ಲಿ ಅವಕಾಶ ನೀಡಿ ಕೃಪಾಂಕ ನೀಡುವ ತತ್ವ ಅಳವಡಿಸುವಂತೆ ನಿರ್ದೇಶಿಸಿತ್ತು. ಅದರನ್ವಯ ಇವರಿಗೆ ಮಾತ್ರ ಕೃಪಾಂಕ ನೀಡಿ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಿದೆ. ಗ್ರಾಮ ಪಂಚಾಯತ್ ಮತ್ತು ಮಂಡಲ್ ಪಂಚಾಯತ್ ಅಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಲ್ಲದಿರುವುದರಿಂದ, ಮತ್ತು ಇಲಾಖಾ ಅನುಮತಿ ಇಲ್ಲದೇ ನೇಮಕಾತಿ ಮೀಸಲಾತಿ ನಿಯಮ ಅನುಸರಿಸದೇ ಶಿಕ್ಷಕರನ್ನು ನೇಮಕ ಮಾಡಿ ಕೊಂಡಿರುವುದರಿಂದ ಮಂಡಲು ಪಂಚಾಯತಿ ಗೌರವ ಶಿಕ್ಷಕರಿಗೆ ಕೃಪಾಂಕ ಸೌಲಭ್ಯ ವಿಸ್ತರಿಸಿರುವುದಿಲ್ಲ.